Azim Premji University

# Post-Event COVERAGE Report of "Sahitya Sahavasa in Udupi"

# Udupi

| Sl. No. | Name of the Publication | Date | Edition | Language | Headline |
|---|---|---|---|---|---|
| 1 | Prajavani | June 2, 2024 | Print | Kannada | Karantha is a Manodharma Sahitya |
| 2 | Udayavani | June 2, 2024 | Print | Kannada | Kada Karanta, Kada Adiga: Gholodadi definition |
| 3 | Vijaya Karnataka | June 2, 2024 | Print | Kannada | Poetry is not born without waiting |
| 4 | Vaartha Bharathi | June 2, 2024 | Print | Kannada | Karanth was Manodharma Pradhan Lyricist: Lakshmish Golthadi |
| 5 | Upayuktha | June 2, 2024 | Print | Kannada | Karanth was Manodharma Pradhan Lyricist: Lakshmish Golthadi |
| 6 | Jayakirana | June 2, 2024 | Print | Kannada | Karanth was Manodharma Pradhan Lyricist: Lakshmish Golthadi |
| 7 | Hosadigantha | June 3, 2024 | Print | Kannada | Karanth was Manodharma Pradhan Lyricist: Lakshmish Golthadi |
| 8 | Karavali Ale | June 3, 2024 | Print | Kannada | Karanth was Manodharma Pradhan Lyricist: Lakshmish Golthadi |
| 9 | Deccan Herald | June 3, 2024 | Print | English | Father's intellectualism manifested in his creativity: Sharath Ananthamurthy |
| 10 | Vijayavani | June 2, 2024 | Online | Kannada | Critical, Creative Literature Ananthamurthy |
| 11 | Tulunadavarthe | June 2, 2024 | Online | Kannada | Dr. Lakshmish Gholpadi launched the literary fest of Azim Premji University |
| 12 | Upayuktha | June 2, 2024 | Online | Kannada | Dr. Lakshmish Gholpadi launched the literary fest of Azim Premji University |
| 13 | Lokabandhu | June 2, 2024 | Online | Kannada | Karanth was Manodharma Pradhan Lyricist: Golthadi |
| 14 | Namma Udupi Bulletin | June 2, 2024 | Online | Kannada | Karanth was Manodharma Pradhan Lyricist: Lakshmish Golthadi |

**Print Media:**

**Date: 02 June, 2024**
**Prajavani**

## Karantha is a Manodharma Sahitya

# ಸಾಹಿತ್ಯ ಸಹವಾಸ ಸಂಭ್ರಮ

ಉಡುಪಿ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಜೂನ್ 1ರಂದು ಬೆಳಿಗ್ಗೆ 9.30ಕ್ಕೆ ಉಡುಪಿಯ ಎಂಜಿಎಂ ಕಾಲೇಜಿನಲ್ಲಿ 'ಸಾಹಿತ್ಯ ಸಹವಾಸ' ಎಂಬ ವಿಶಿಷ್ಟ ಸರಣಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸಾಹಿತಿಗಳಾದ ಶಿವರಾಮ ಕಾರಂತ, ಗೋಪಾಲಕೃಷ್ಣ ಅಡಿಗ ಮತ್ತು ನವ್ಯ ಸಾಹಿತ್ಯ ಚಳವಳಿ ಕುರಿತು ಅನಂತಮೂರ್ತಿ ಅವರು ನೀಡಿರುವ ಮೂರು ಉಪನ್ಯಾಸಗಳ ಬಗ್ಗೆ ಕಾರ್ಯಕ್ರಮ ನಡೆಯಲಿದೆ. ಅನಂತಮೂರ್ತಿ ಅವರ ವಿದ್ವತ್‌ಪೂರ್ಣ ಉಪನ್ಯಾಸಗಳನ್ನು ವಿಶ್ವದೆಲ್ಲೆಡೆ ಇರುವ ಆಸಕ್ತರಿಗೆ ದೊರೆಯುವಂತೆ ಇಂಗ್ಲಿಷ್ ಉಪಶೀರ್ಷಿಕೆಗಳೊಂದಿಗೆ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಯೂಟ್ಯೂಬ್ ವಾಹಿನಿಯ ಮೂಲಕ ಬಿಡುಗಡೆ ಮಾಡಲಾಗುತ್ತಿದೆ. ಉಪನ್ಯಾಸ ಸರಣಿ ಕುವೆಂಪು, ದ.ರಾ.ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಚಂದ್ರಶೇಖರ ಕಂಬಾರ, ಎ.ಕೆ. ರಾಮಾನುಜನ್, ಗಿರೀಶ್ ಕಾರ್ನಾಡ್ ಅವರ ಕೊಡುಗೆಗಳು, ದಲಿತ ಸಾಹಿತ್ಯ ಚಳುವಳಿಗಳ ಮೇಲೆ ಬೆಳಕು ಚೆಲ್ಲಲಿವೆ.

ಸಾಹಿತಿ, ಚಿಂತಕ ಲಕ್ಷ್ಮೀಶ ತೋಳ್ಪಾಡಿ, ಕಾರಂತ, ಅಡಿಗರ ಕುಟುಂಬದ ಸದಸ್ಯರ ಉಪಸ್ಥಿತಿಯಲ್ಲಿ ವಿಡಿಯೊ ಸರಣಿ ಬಿಡುಗಡೆ ಮಾಡಲಾಗುವುದು. ಕುವೆಂಪು ವಿವಿ ಉಪಕುಲಪತಿ ಪ್ರೊ.ಶರತ್ ಅನಂತಮೂರ್ತಿ ಅಧ್ಯಕ್ಷತೆ ವಹಿಸುವರು. ಕನ್ನಡ ಸಾಹಿತ್ಯಕ್ಕೆ ಕಾರಂತ ಮತ್ತು ಅಡಿಗರ ಕೊಡುಗೆಯ ಬಗ್ಗೆ ವಿದ್ವತ್ ಗೋಷ್ಠಿ, ಭಾಷಣ, ಯಕ್ಷಗಾನ ಪ್ರದರ್ಶನ, ಅಡಿಗರ ಗೀತೆಗಳ ಗಾಯನ, ಪ್ರಮುಖ ಸಾಹಿತಿಗಳ ಚಿತ್ರಾವಳಿ ಪ್ರದರ್ಶನ, ವಿವಿಧ ಸಾಹಿತಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

Azim Premji University

**Print Media:**

**Date: 02 June, 2024**
**Udayavani**

**Kada Karanta, Kada Adiga: Gholodadi definition**

# ಕಾಯದ ಕಾರಂತ, ಕಾದ ಅಡಿಗ: ತೋಳ್ಪಾಡಿ ವ್ಯಾಖ್ಯಾನ

## 'ಸಾಹಿತ್ಯ ಸಹವಾಸ'ದಲ್ಲಿ ಅನಂತಮೂರ್ತಿ ವೀಡಿಯೋ ಉಪನ್ಯಾಸ ಸರಣಿ ಬಿಡುಗಡೆ

ಉಡುಪಿ, ಜೂ. 1: ಕಾಯದೇ ಕಾವ್ಯ ಹುಟ್ಟುವುದಿಲ್ಲ, ಕಾಯಲು ಕವಿಗಳಿಗಷ್ಟೇ ಸಾಧ್ಯ. ಆದರೆ ಕೋಟ ಶಿವರಾಮ ಕಾರಂತರು ಈ ವಿಷಯದಲ್ಲಿ ಭಿನ್ನವಾಗಿದ್ದರು. ಅವರು ಕಾಯುವುದಕ್ಕೆ ಸಿದ್ಧರಿರಲಿಲ್ಲ, ಅವರ ಸಾಹಿತ್ಯವು ತತ್‌ಕ್ಷಣಿಕತೆಯ ಪ್ರತಿರೂಪವಾಗಿತ್ತು, ಗೋಪಾಲಕೃಷ್ಣ ಅಡಿಗರು ಕವನದ ಒಂದು ಸಾಲಿನ ಒಂದು ಶಬ್ದಕ್ಕೆ ದಿನಗಟ್ಟಲೆ ಕಾದದ್ದುಂಟು. ಅವರು ನವ್ಯೋದಯ ಶೈಲಿಯ ಕಾವ್ಯ ರಚನೆಯಿಂದ ಕನ್ನಡ ಸಾಹಿತ್ಯದಲ್ಲಿ ಸಂಚಲನ ಮೂಡಿಸಿದರು. ಕನ್ನಡ ಸಾಹಿತ್ಯದಲ್ಲಿ ಕಾರಂತರ ಪ್ರಯೋಗಶೀಲತೆ, ಅಡಿಗರ ನವ್ಯತೆಯೇ ಒಂದು ಸೊಬಗಿನ ಸಾಹಿತ್ಯದ ಕಾಲಘಟ್ಟ ಎಂದು ಚಿಂತಕ ಲಕ್ಷ್ಮೀಶ ತೋಳ್ಪಾಡಿ ವ್ಯಾಖ್ಯಾನಿಸಿದರು.

ಬೆಂಗಳೂರು ಅಜೀಂ ಪ್ರೇಮ್‌ಜೀ ವಿ.ವಿ. ಆಶ್ರಯದಲ್ಲಿ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪ ಶನಿವಾರ ಜರಗಿದ 'ಸಾಹಿತ್ಯ ಸಹವಾಸ' ದಿ| ಪ್ರೊ| ಯು.ಆರ್. ಅನಂತಮೂರ್ತಿ ಅವರ ವೀಡಿಯೋ ಉಪನ್ಯಾಸ ಸರಣಿ ಬಿಡುಗಡೆ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾಹಿತ್ಯದಲ್ಲಿ ಶಿವರಾಮ ಕಾರಂತ, ದ.ರಾ. ಬೇಂದ್ರೆಯವರಂತೆ ಸಿದ್ಧಶೈಲಿಯ ಪ್ರತಿಕೂಲ, ಹೊರತಾಗಿಯೂ ನಾವೀನ್ಯತೆ ಅನುಕೂಲ ಗೋಪಾಲಕೃಷ್ಣ ಅಡಿಗರಿಗಿತ್ತು. ಶಿವರಾಮ ಕಾರಂತರು, ಅಡಿಗರು, ಪ್ರೊ| ಯು. ಆರ್. ಅನಂತಮೂರ್ತಿ ಅವರು ಮನಸ್ಸು ಮುಟ್ಟುವ ಸೂಕ್ಷ್ಮಾತಿಸೂಕ್ಷ್ಮ ಲಹರಿಯನ್ನು ಸೃಷ್ಟಿಸಿದವರು. ಅನಂತಮೂರ್ತಿ ಅವರು ಅಡಿಗರನ್ನು ಗುರು ಸ್ಥಾನದಲ್ಲಿರಿಸಿ ಗೌರವಿಸುತ್ತಿದ್ದರು. ಕನ್ನಡ ಸಾಹಿತ್ಯದಲ್ಲಿ ಹೊಸ ಜನ್ಮ ಪಡೆದ ಕೀರ್ತಿ ಅಡಿಗರಿಗೆ ಸಲ್ಲುತ್ತದೆ ಎಂದು ಬಣ್ಣಿಸಿದರು.

ನವ್ಯೋದಯ ಶೈಲಿಯ ಸಾಹಿತ್ಯವನ್ನು ಹಲವು ಟೀಕೆಗಳ ಹೊರತಾಗಿಯೂ ಅಡಿಗರು ತಮ್ಮನಂತೆ ಸಾಧಿಸಿಬಿಟ್ಟಿದ್ದರು. ಶಿವರಾಮ ಕಾರಂತರು ನವ್ಯೋದಯ ಶೈಲಿಯ ಸಾಹಿತ್ಯಕ್ಕೆ ದಿಕ್ಕನ್ನು ತೋರಿಸಿಕೊಟ್ಟರು. ಅವರು ಮನೋಧರ್ಮ, ಭಾವ ಪ್ರಧಾನ ಹೊಂದಿದ್ದ ಅನನ್ಯ ಮಾನವೀಯ ವ್ಯಕ್ತಿತ್ವ ಈ ರೀತಿ ಅಡಿಗರು ಮತ್ತು ಕಾರಂತರ ಸಾಕಷ್ಟು ವಿಷಯಗಳನ್ನು ಪ್ರೊ| ಯು. ಆರ್. ಅನಂತಮೂರ್ತಿ ಅವರ ವೀಡಿಯೋ ಸಂಗ್ರಹದಲ್ಲಿ ದಾಖಲಾಗಿದೆ ಎಂದು ತಿಳಿಸಿದರು.

ಅಜೀಂ ಪ್ರೇಮ್‌ಜಿ ಫೌಂಡೇಶನ್ ಮುಖ್ಯ ಸಂವಹನಾಧಿಕಾರಿ ಸುಧೀಶ್ ವೆಂಕಟೇಶ್ ಸ್ವಾಗತಿಸಿ, ಪ್ರಸ್ತಾವನೆಗೈದರು. ಎಂಜಿಎಂ ಕಾಲೇಜು ಪ್ರಾಂಶುಪಾಲ ಪ್ರೊ| ಲಕ್ಷ್ಮೀನಾರಾಯಣ್ ಕಾರಂತ ಮಾತನಾಡಿದರು. ನೃತ್ಯ ಕಲಾವಿದೆ, ಕೋಟ ಶಿವರಾಮ ಕಾರಂತ ಅವರ ಪುತ್ರಿ ಕ್ಷಮಾ ರಾವ್, ಪ್ರೊ| ಯು. ಆರ್. ಅನಂತಮೂರ್ತಿ ಅವರ ಪತ್ನಿ ಎಸ್ತರ್ ಅನಂತಮೂರ್ತಿ, ಪ್ರೊ| ಗೋಪಾಲಕೃಷ್ಣ ಅಡಿಗ ಟ್ರಸ್ಟ್‌ನ ಸಂಚಾಲಕ ಜಯರಾಮ ಅಡಿಗ ಉಪಸ್ಥಿತರಿದ್ದರು. ಅಜೀಂ ಪ್ರೇಮ್‌ಜೀ ವಿ.ವಿ.ಯ ಸಿ. ಎಸ್. ಮಹೇಶ್ ಕುಮಾರ್ ನಿರೂಪಿಸಿದರು.



ಸಾಹಿತ್ಯ ಸಹವಾಸ ಕಾರ್ಯಕ್ರಮದಲ್ಲಿ ಲಕ್ಷ್ಮೀಶ ತೋಳ್ಪಾಡಿ ಮಾತನಾಡಿದರು

### ಸಾಹಿತ್ಯ ವಿಮರ್ಶೆ ಗಂಭೀರತೆ ಕಳೆದುಕೊಂಡಿದೆ

ಪ್ರಸ್ತುತ ಕನ್ನಡ ಸಾಹಿತ್ಯ ವಿಮರ್ಶೆ ತನ್ನ ಗಂಭೀರತೆಯನ್ನು ಕಳೆದುಕೊಂಡಿದೆ ಎಂದು ಪ್ರೊ| ಯು. ಆರ್. ಅನಂತ್ ಮೂರ್ತಿ ಅವರ ಪುತ್ರ, ಕುವೆಂಪು ವಿ. ವಿ. ಕುಲಪತಿ ಪ್ರೊ| ಶರತ್ ಅನಂತ್ ಮೂರ್ತಿ ಕಳವಳ ವ್ಯಕ್ತಪಡಿಸಿದರು. ಕೋಟ ಶಿವರಾಮ ಕಾರಂತರು, ಗೋಪಾಲಕೃಷ್ಣ ಅಡಿಗರು, ನಮ್ಮ ತಂದೆ ಅನಂತಮೂರ್ತಿ ಅವರ ಕಾಲಘಟ್ಟದಲ್ಲಿ ಟೀಕೆಗಳ ನಡುವೆಯೂ ಸಾಹಿತ್ಯ ಚಟುವಟಿಕೆ ಕುರಿತು ಅಂದಿನ ಕೊಡುವಿಕೆ, ವಿಮರ್ಶೆ, ಚರ್ಚೆ ತುಂಬ ಸುಂದರವಾಗಿತ್ತು. ಆ ದಿನಗಳನ್ನು ನೋಡಿಕೊಂಡು ನಾವು ಬೆಳೆದಿದ್ದೇವೆ. ಇತ್ತೀಚಿನ ದಿನಗಳಲ್ಲಿ ಈ ರೀತಿ ಗಾಢ ಆಲೋಚನೆ, ಚರ್ಚೆಗಳು ಹೆಚ್ಚು ನಡೆಯುತ್ತಿಲ್ಲ, ಗುಂಪುಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಅಜೀಂ ಪ್ರೇಮ್‌ಜೀ ವಿ.ವಿ. ಉತ್ತಮ ಕಾರ್ಯಕ್ಕೆ ಮುಂದಾಗಿದ್ದು, ಹಂತಹಂತವಾಗಿ ಈ ರೀತಿ ಕಾರ್ಯಕ್ರಮ ಸಾಹಿತ್ಯದ ಕೊಡುವಿಕೆ, ಗಾಢ ಚರ್ಚೆಗಳು ನಡೆಯಬೇಕಿದೆ ಎಂದು ಆಶಯಪಟ್ಟರು.

'ಲಕ್ಷ ಪುಟದಷ್ಟು ಬರೆದ ಅದ್ಭುತ ಕಾರಂತರು' 7



### ಸಾಹಿತ್ಯ ಸಹವಾಸದಲ್ಲಿ ಕಣ್ಸೆಳೆದ ಛಾಯಾಚಿತ್ರ ಪ್ರದರ್ಶನ

'ಸಾಹಿತ್ಯ ಸಹವಾಸ' ಕಾರ್ಯಕ್ರಮ ಪ್ರಯುಕ್ತ ಹಮ್ಮಿಕೊಂಡ ಛಾಯಾಚಿತ್ರ ಪ್ರದರ್ಶನ ಕಣ್ಮನ ಸೆಳೆಯಿತು. ಇಲ್ಲಿನ ಗೀತಾಂಜಲಿ ಸಭಾಂಗಣದಲ್ಲಿ ಕೋಟ ಶಿವರಾಮ ಕಾರಂತರು, ಗೋಪಾಲಕೃಷ್ಣ ಅಡಿಗರ ಕಪ್ಪು ಬಿಳುಪಿನ, ಬಣ್ಣದ ಛಾಯಚಿತ್ರ ಪ್ರದರ್ಶನ ವಿಶಿಷ್ಟವಾಗಿತ್ತು.

ಇಬ್ಬರು ಮಹನೀಯರ ಸಾಹಿತಿಗಳ ವೈಯಕ್ತಿಕ ಭಾವಚಿತ್ರ, ಕುಟುಂಬ ಸದಸ್ಯರೊಂದಿಗೆ, ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಛಾಯಾಚಿತ್ರಗಳು, ವಿವಿಧ ಪ್ರಶಸ್ತಿ ಸ್ವೀಕಾರ, ಕಾರಂತರ ಯಕ್ಷಗಾನ ನಾಟ್ಯ, ಪ್ರಮುಖ ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಕಾರರು ರಚಿಸಿದ ಚಿತ್ರಗಳು, ಅಡಿಗರ ಯಾವ ಮೋಹನ ಮುರಳಿ ಕರೆಯಿತೋ ಮೂಲ ಬರಹದ ಚಿತ್ರ ವಿಶಿಷ್ಟವಾಗಿ ಗಮನ ಸೆಳೆಯಿತು. ಫೌಂಡೇಶನ್ ಈ ಚಿತ್ರಗಳನ್ನು ತಮ್ಮ ಸಂಗ್ರಹಗಳಲ್ಲಿ ಇರಿಸಿಕೊಂಡಿದ್ದು, ಮರದ ರ್‍ಯಾಕ್‌ಗಳಲ್ಲಿ ಛಾಯಾಚಿತ್ರಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದೆ.

**Print Media:**

**Date: 02 June, 2024**
**Vijaya Karnataka**

## Poetry is not born without waiting

# ಕಾಯದ ಹೊರತು ಕಾವ್ಯ ಹುಟ್ಟದು

**ವಿಕ ಸುದ್ದಿಲೋಕ** ಉಡುಪಿ

ಕಾಯೋದು ಕವಿಗಳಿಗಷ್ಟೇ ಸಾಧ್ಯವಿದ್ದು ಕಾಯದ ಹೊರತು ಕಾವ್ಯ ಹುಟ್ಟದು ಎಂದು ಚಿಂತಕ ಲಕ್ಷ್ಮೀಶ ತೋಳ್ಪಾಡಿ ಹೇಳಿದ್ದಾರೆ.

ಬೆಂಗಳೂರಿನ ಅಜೀಂ ಪ್ರೇಮ್ ಜೀ ವಿವಿ ವತಿಯಿಂದ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಸಾಹಿತ್ಯ ಸಹವಾಸ: ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಪ್ರೊ.ಯು.ಆರ್. ಅನಂತಮೂರ್ತಿ ಅವರ ವೀಡಿಯೊ ಉಪನ್ಯಾಸ ಸರಣಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಳಂಬ ಕಾಲದ ಸಂಗೀತ ಇಷ್ಟಪಡುತ್ತಿದ್ದ ಕಾರಂತರಿಗೆ ಸಾಹಿತ್ಯದಲ್ಲಿ ಕಾಯುವ ತಾಳ್ಮೆ ಇರಲಿಲ್ಲ. ಆದರೆ ಅಡಿಗರಿಗೆ ಕಾಯೋದು ಬಲು ಇಷ್ಟ (ನಾಲ್ಕು ವರ್ಷ ಏನೂ ಬರೆಯದೆ ಸುಮ್ಮನಿದ್ದರು) ಎಂದರು.

ಶಿವಮೊಗ್ಗ ಕುವೆಂಪು ವಿವಿ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಅಧ್ಯಕ್ಷತೆ ವಹಿಸಿ, ಹಿಂದೆ ಜ್ಞಾನದ ಮುತ್ತುಗಳಾಗಿದ್ದ ಸಾಹಿತಿಗಳಲ್ಲಿ ಪರಸ್ಪರ ಆತ್ಮೀಯತೆ, ಗೌರವವಿದ್ದರೆ ಇಂದು ಜಾತಿ, ವೈಯಕ್ತಿಕ ಜಗಳವೇ ಹೆಚ್ಚು ಎಂದರು.

ಎಂಜಿಎಂ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ.ಲಕ್ಷ್ಮೀನಾರಾಯಣ ಕಾರಂತ, ನೃತ್ಯ ಕಲಾವಿದೆ ಕ್ಷಮಾ ರಾವ್, ಎಸ್ತರ್ ಅನಂತಮೂರ್ತಿ, ಬೆಂಗಳೂರಿನ ಎಂ. ಗೋಪಾಲಕೃಷ್ಣ ಅಡಿಗ ಟ್ರಸ್ಟಿನ ಸಂಚಾಲಕ ಎ.ಜಯರಾಮ ಅಡಿಗ ಮುಖ್ಯ ಅತಿಥಿಯಾಗಿದ್ದರು.

ಚಿನ್ಮಯಿ ಅಡಿಗರ ಗೀತೆ ಹಾಡಿದರು. ಸಿ.ಎಸ್. ಮಹೇಶ್ ಕುಮಾರ್ ನಿರೂಪಿಸಿದರು. ಬೆಂಗಳೂರಿನ ಅಜೀಂ ಪ್ರೇಮ್‌ಜೀ ಫೌಂಡೇಶನ್ ಮುಖ್ಯ ಸಂವಹನಾಧಿಕಾರಿ ಸುಧೀಶ್ ವೆಂಕಟೇಶ್ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಗೀತಾಂಜಲಿ ಸಭಾಂಗಣದಲ್ಲಿ ಕಾರಂತ, ಅಡಿಗ ಚಿತ್ರ ಪ್ರದರ್ಶನವನ್ನು ಎಸ್ತರ್ ಅನಂತಮೂರ್ತಿ ಉದ್ಘಾಟಿಸಿದರು.



ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಪ್ರೊ.ಯು.ಆರ್. ಅನಂತಮೂರ್ತಿ ಅವರ ವೀಡಿಯೊ ಉಪನ್ಯಾಸ ಸರಣಿಯನ್ನು ಚಿಂತಕ ಲಕ್ಷ್ಮೀಶ ತೋಳ್ಪಾಡಿ ಬಿಡುಗಡೆ ಮಾಡಿದರು.

**Print Media:**


**Date: 02 June, 2024**
**Vaartha Bharathi**

## Karanth was Manodharma Pradhan Lyricist: Lakshmish Golthadi

ಜನದನಿಯ ಸಾರಥಿ
ವಾರ್ತಾ ಭಾರತಿ

# ಕಾರಂತರದ್ದು ಮನೋಧರ್ಮ ಪ್ರಧಾನ ಸಾಹಿತ್ಯ: ಲಕ್ಷ್ಮೀಶ ತೋಳ್ಪಾಡಿ

## ಉಡುಪಿ: ಅಝೀಮ್ ಪ್ರೇಮ್‌ಜಿ ವಿವಿಯ 'ಸಾಹಿತ್ಯ ಸಹವಾಸ'



ಉಡುಪಿ, ಜೂ.1: ಡಾ.ಶಿವರಾಮ ಕಾರಂತರು ಕನ್ನಡದ ಅನನ್ಯ ವ್ಯಕ್ತಿ. ಅನನ್ಯತೆ ಏಕಾಂತವನ್ನುಂಟು ಮಾಡುತ್ತದೆ. ಏಕಾಂತವಾಗಿ ಕನ್ನಡವನ್ನು ಲೋಕಾಂತ ದಾಟಿಸಿದವರು ಕಾರಂತರು. ಗೋಪಾಲಕೃಷ್ಣ ಅಡಿಗರು ಕನ್ನಡಕ್ಕೆ ಹೊಸ ಧಾತುವನ್ನು ಸೇರಿಸಿದರು. ಇವೆಲ್ಲವನ್ನು ಸೇರಿಸಿ ಡಾ.ಯು.ಆರ್.ಅನಂತಮೂರ್ತಿ ಕನ್ನಡಕ್ಕೆ ಹೊಸ ಅರಿವನ್ನು ಮೂಡಿಸಿದರು ಎಂದು ಸಾಹಿತಿ ಲಕ್ಷ್ಮೀಶ ತೋಳ್ಪಾಡಿ ಹೇಳಿದ್ದಾರೆ.

ಬೆಂಗಳೂರಿನ ಅಝೀಂ ಪ್ರೇಮ್‌ಜೀ ವಿಶ್ವವಿದ್ಯಾನಿಲಯದ ವತಿಯಿಂದ ಉಡುಪಿಯ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಇಂದು ಆಯೋಜಿಸಿದ್ದ ಸಾಹಿತ್ಯಿಕ ಉಪನ್ಯಾಸ ಸರಣಿ 'ಸಾಹಿತ್ಯ ಸಹವಾಸ'ವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮನಸ್ಸು ಮುಟ್ಟಬಹುದಾದ ಸೂಕ್ಷ್ಮಾತಿ ಸೂಕ್ಷ್ಮವಾದ ಲಹರಿಗಳನ್ನು, ಅಸ್ತಿತ್ವದ ಬಿಂದುಗಳನ್ನು ಈ ನೆಲದ ಮೂವರು ಮಹನೀಯರಾದ ಕಾರಂತರು, ಅನಂತಮೂರ್ತಿ ಮತ್ತು ಅಡಿಗರು ಮುಟ್ಟಿದವರು ಎಂದು ತೋಳ್ಪಾಡಿ ಅಭಿಪ್ರಾಯಪಟ್ಟರು.

ಕಾರಂತರಿಗೆ ಶಾಸ್ತ್ರಕ್ಕಿಂತ ಮನೋಧರ್ಮ ಪ್ರಧಾನವಾಗಿರುವ ಭಾವ ಮುಖ್ಯವಾಗಿತ್ತು. ಅವರದು ಸ್ವಯಂಕೃತ ವ್ಯಕ್ತಿತ್ವ. ತಮ್ಮ ದಾರಿ ಮತ್ತು ಅಭಿವ್ಯಕ್ತಿಯನ್ನು ತಾನೇ ಕಂಡುಕೊಂಡವರು. ಅದೊಂದು ಚಾರಿತ್ರಿಕ ಸ್ಥಿತಿಯಷ್ಟೇ ಅಲ್ಲ; ಅದಕ್ಕೆ ಅವರ ವ್ಯಕ್ತಿತ್ವದಲ್ಲಿದ್ದ ಪ್ರಯೋಗಶೀಲತೆಯ ಗುಣವೂ ಒಂದು ಕಾರಣ ಎಂದರು.

ಕಾರಂತರು ತಮ್ಮ ಶಕ್ತಿ ಸಾಮರ್ಥ್ಯವನ್ನೆಲ್ಲಾ ಒಂದು ಕೃತಿಯಲ್ಲಿ ತೊಡಗಿಸಿಕೊಂಡು ಬರೆಯಲಿಲ್ಲ. ಸಾಹಿತ್ಯ ಸ್ಫೂರ್ತಿಗೆ ಅವರು ಕಾಯಲು ಸಿದ್ಧರಿರಲಿಲ್ಲ. ಅವರದು ಮೌಖಿಕ ಸಂಪ್ರದಾಯ. ಆರಂಭಿಕ ಕೆಲವು ಕಾದಂಬರಿಗಳನ್ನು ಹೊರತುಪಡಿಸಿ ಅವರು ಬರೆದುದು ಕಡಿಮೆ, ಹೇಳಿ ಬರೆಸಿದ್ದೆ ಹೆಚ್ಚು. ಕಾರಂತರ ಬಳಿ ಸಂವಾದ ಕಷ್ಟ. ವೇಗ, ತಾತ್ಕಾಲಿಕತೆ, ಸ್ಫೂರ್ತಿ ಅವರ ಬರಹದಲ್ಲಿ ಎದ್ದು ಕಾಣುವ ಗುಣ ಎಂದು ತೋಳ್ಪಾಡಿ ವಿವರಿಸಿದರು.

ಗೋಪಾಲಕೃಷ್ಣ ಅಡಿಗರಿಗೆ ಸಿದ್ಧಶೈಲಿಯ ಸೌಲಭ್ಯ ಇರಲಿಲ್ಲ. ನಾವೀನ್ಯತೆಯ ಅನುಕೂಲವೂ ಇರಲಿಲ್ಲ. ಅಲ್ಲದೇ ಅವರು ಸಿದ್ಧಶೈಲಿಯ ಪ್ರತಿಕೂಲವನ್ನು ಅರ್ಥ ಮಾಡಿಕೊಂಡಿದ್ದರು. ಹೀಗಾಗಿ ಬೇಂದ್ರೆ ಪ್ರಭಾವದಿಂದ ಪಾರಾಗಲು ನಾಲ್ಕು ವರ್ಷ ಯಾವುದೇ ಪದ್ಯವನ್ನು ಅವರು ಬರೆಯಲಿಲ್ಲ. ಹೀಗಾಗಿ ನವೋದಯದಿಂದ ಬರೆಯಲು ಆರಂಭಿಸಿದ ಅಡಿಗರು ಮುಂದೆ ನವ್ಯ ಕಾರಣರಾಗಿ ಹೊಸ ಹುಟ್ಟು ಪಡೆದರು ಎಂದರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ.ಯು.ಆರ್.ಅನಂತಮೂರ್ತಿಯವರ ಪುತ್ರ, ಹಾಗೂ ಶಿವಮೊಗ್ಗ ಕುವೆಂಪು ವಿವಿಯ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಮಾತನಾಡಿ, ತಮ್ಮ ತಂದೆಯವರ ಸೃಜನಶೀಲ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತಿದ್ದುದೇ ಮಾತಿನ ಮೂಲಕ. ಮಾತನಾಡುವಾಗಲಷ್ಟೇ ಅವರಲ್ಲಿ ಹೊಸ ಹೊಸ ಯೋಚನೆಗಳು ಮೂಡುತ್ತಿದ್ದವು. ಅನಾರೋಗ್ಯದ ಸಮಯದಲ್ಲೂ ಅವರು ಮಾತಿಗಾಗಿ ಹಂಬಲಿಸುತ್ತಿದ್ದರು. ಮಾತುಗಳ ನಡುವೆಯೇ ಅವರ ಹೊಸ ಯೋಚನೆಗಳು ಸೃಷ್ಟಿಯಾಗುತಿದ್ದವು ಎಂದರು.

ತಂದೆಯವರ ಬಗ್ಗೆ ನೆನಪುಗಳನ್ನು ಮೆಲುಕು ಹಾಕಿದ ಪ್ರೊ.ಶರತ್ ಅನಂತಮೂರ್ತಿ, ಅವರ ಸಾಹಿತ್ಯದ ಕೆಲಸಗಳು, ಸಾಹಿತಿಗಳ ಸಂಪರ್ಕವನ್ನು ಸ್ಮರಿಸಿಕೊಂಡರು. ಇಂದಿನ ಸಂದರ್ಭದಲ್ಲಿ ಅಂತಹ ಆರೋಗ್ಯಕರ ಚರ್ಚೆಯ ವಾತಾವರಣ ಕಾಣದಿರುವುದರ ಬಗ್ಗೆ ವಿಷಾದಿಸಿದರು. ಸಾಹಿತ್ಯ ವಿಮರ್ಶೆ ಇನ್ನಷ್ಟು ಗಂಭೀರವಾಗಿ ನಡೆಯಬೇಕಾದ ಅಗತ್ಯವನ್ನು ತಿಳಿಸಿದರು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಯು.ಆರ್. ಅನಂತಮೂರ್ತಿ ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಕೋಟ ಶಿವರಾಮ ಕಾರಂತ ಹಾಗೂ ನವ್ಯ ಕಾವ್ಯದ ಹರಿಕಾರ ಗೋಪಾಲಕೃಷ್ಣ ಅಡಿಗರ ಕುರಿತು ನೀಡಿರುವ ಉಪನ್ಯಾಸಗಳನ್ನು ಅಝೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯ ಇಂಗ್ಲಿಷ್ ಉಪಶೀರ್ಷಿಕೆಗಳೊಂದಿಗೆ ಯೂಟ್ಯೂಬ್ ವಾಹಿನಿಯ ಮೂಲಕ ಬಿಡುಗಡೆ ಮಾಡಲಾಯಿತು. ಈ ವೀಡಿಯೊ ಸರಣಿಯನ್ನು ಸಹ ಲಕ್ಷ್ಮೀಶ ತೋಳ್ಪಾಡಿ ಬಿಡುಗಡೆಗೊಳಿಸಿದರು.

ವೇದಿಕೆಯಲ್ಲಿ ಡಾ.ಅನಂತಮೂರ್ತಿಯವರ ಪತ್ನಿ ಎಸ್ತರ್ ಅನಂತಮೂರ್ತಿ, ಡಾ.ಕಾರಂತರ ಪುತ್ರಿ ಕ್ಷಮಾ ರಾವ್, ಹಿರಿಯ ಪತ್ರಕರ್ತ, ಅಡಿಗ ಟ್ರಸ್ಟ್‌ನ ಜಯರಾಮ ಅಡಿಗ, ಎಂಜಿಎಂ ಕಾಲೇಜಿನ ಪ್ರಾಂಶುಪಾಲ ಪ್ರೊ. ಲಕ್ಷ್ಮೀನಾರಾಯಣ ಕಾರಂತ ಉಪಸ್ಥಿತರಿದ್ದರು.

ಬೆಂಗಳೂರಿನ ಅಝೀಮ್ ಪ್ರೇಮ್‌ಜಿ ಫೌಂಡೇಶನ್‌ನ ಮುಖ್ಯ ಸಂವಹನಾಧಿಕಾರಿ ಸುಧೀಶ್ ವೆಂಕಟೇಶ್ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಸಿ.ಎಸ್.ಮಹೇಶ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ಅಂಗವಾಗಿ ಗೀತಾಂಜಲಿ ಸಭಾಭವನದಲ್ಲಿ ಆಯೋಜಿಸಲಾಗಿದ್ದ ಕಾರಂತ ಮತ್ತು ಅಡಿಗರ ಜೀವನವನ್ನು ಬಿಂಬಿಸುವ ಛಾಯಾಚಿತ್ರ ಪ್ರದರ್ಶನಕ್ಕೆ ಎಸ್ತರ್ ಅನಂತಮೂರ್ತಿ ಚಾಲನೆ ನೀಡಿದರು. ಕ್ಷಮಾ ರಾವ್ ಉಪಸ್ಥಿತರಿದ್ದರು.

ಈಗಾಗಲೇ ಧಾರವಾಡದಲ್ಲಿ ಈ ಸರಣಿಯ ಮೊದಲ ಕಾರ್ಯಕ್ರಮ ನಡೆದಿದ್ದು, ಮೂರನೇ ಕಾರ್ಯಕ್ರಮ ಜುಲೈಯಲ್ಲಿ ಶಿವಮೊಗ್ಗದಲ್ಲಿ ನಡೆಯಲಿದೆ.

Mangalore Edition
Jun 2, 2024 Page No. 3
Powered by: erelego.com

**Print Media:**

**Date: 02 June, 2024**
**Upayukta**

## Karanth was Manodharma Pradhan Lyricist: Lakshmish Golthadi


https://www.upayuktha.com/ https://epaper.upayuktha.com/

A Member of PADMA (Print And Digital Media Association)- recognised by Govt of India

ಉಪಯುಕ್ತ ನ್ಯೂಸ್

02-06-2024, ಭಾನುವಾರ

ಉಪಯುಕ್ತ ನ್ಯೂಸ್ ಡಿಜಿಟಲ್ ಮಾಧ್ಯಮ ಬಳಗದ ಎಲೆಕ್ಟ್ರಾನಿಕ್ ಪತ್ರಿಕೆ









### ಅಜೀಂ ಪ್ರೇಮ್‌ಜಿ ವಿವಿಯ ಸಾಹಿತ್ಯ ಸಹವಾಸಕ್ಕೆ ಚಾಲನೆ ನೀಡಿ ಡಾ.ಲಕ್ಷ್ಮೀಶ ತೋಳ್ಪಾಡಿ

# ಕಾರಂತರದ್ದು ಶಾಸ್ತ್ರಕ್ಕಿಂತ ಮನೋಧರ್ಮ ಪ್ರಧಾನ ಸಾಹಿತ್ಯ




**ಉಡುಪಿ:** ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವತಿಯಿಂದ ಇಲ್ಲಿನ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ 'ಸಾಹಿತ್ಯ ಸಹವಾಸ' ಎಂಬ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಜ್ಞಾನಪೀಠ ಪ್ರಶಸ್ತಿ ವಿಜೇತ ದಿ. ಯು.ಆರ್.ಅನಂತಮೂರ್ತಿಯವರು ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಶಿವರಾಮ ಕಾರಂತ, ನವ್ಯ ಸಾಹಿತ್ಯ, ಮತ್ತು ನವ್ಯ ಸಾಹಿತ್ಯದ ಹರಿಕಾರ ಗೋಪಾಲಕೃಷ್ಣ ಅಡಿಗರ ಕುರಿತು ನೀಡಿರುವ ಉಪನ್ಯಾಸಗಳನ್ನು ಇಂಗ್ಲಿಷ್ ಉಪಶೀರ್ಷಿಕೆಗಳೊಂದಿಗೆ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಯೂಟ್ಯೂಬ್ ವಾಹಿನಿಯ ಮೂಲಕ ಬಿಡುಗಡೆ ಮಾಡಲಾಯಿತು. ಮುಂದಿನ ದಿನಗಳಲ್ಲಿ ಈ ವಿದ್ವತ್ಪೂರ್ಣ ಉಪನ್ಯಾಸಗಳು ಪಾಡ್ಕಾಸ್ಟ್ ರೂಪದಲ್ಲಿಯೂ ಎಲ್ಲ ಆಸಕ್ತರಿಗೆ ಲಭ್ಯವಾಗಲಿವೆ.

ವಿಡಿಯೊ ಸರಣಿಯನ್ನು ಬಿಡುಗಡೆ ಮಾಡಿದ ನಾಡಿನ ಹಿರಿಯ ಸಾಹಿತಿಗಳು ಮತ್ತು ಚಿಂತಕರಾದ ಲಕ್ಷ್ಮೀಶ ತೋಳ್ಪಾಡಿಯವರು ಮಾತನಾಡಿ "ಮನಸ್ಸು ಮುಟ್ಟಬಹುದಾದ ಸೂಕ್ಷ್ಮಾತಿಸೂಕ್ಷ್ಮವಾದ ಲಹರಿಗಳನ್ನು, ಅಸ್ತಿತ್ವದ ಬಿಂದುಗಳನ್ನು ಈ ನೆಲದ ಮೂವರು ಮಹನೀಯರಾದ ಕಾರಂತರು, ಅನಂತಮೂರ್ತಿ ಮತ್ತು ಅಡಿಗರು ಮುಟ್ಟಿದವರು. ಅಡಿಗರು ಸಿದ್ಧಶೈಲಿಯಿಂದ ಹೊರಟು ಹೊಸಹುಟ್ಟು ಅಥವಾ ತಾವು ಪಡೆಯಬೇಕಾದ ನಾವೀನ್ಯತೆಯ ಅನುಕೂಲದ ಅನಿವಾರ್ಯತೆಯನ್ನು ತೋರಿಸಿಕೊಟ್ಟವರು ಎಂದು ಬಣ್ಣಿಸಿದರು.

ಕಾರಂತರದು ಸ್ವಯಂಕೃತ ವ್ಯಕ್ತಿತ್ವ. ತಮ್ಮದಾರಿ ಮತ್ತು ಅಭಿವ್ಯಕ್ತಿಯನ್ನು ತಾನೇ ಕಂಡುಕೊಂಡವರು. ಅದೊಂದು ಚಾರಿತ್ರಿಕ ಸ್ಥಿತಿಯಷ್ಟೇ ಅಲ್ಲ; ಅದಕ್ಕೆ ಅವರ ವ್ಯಕ್ತಿತ್ವದ ಪ್ರಯೋಗಶೀಲತೆಯೂ ಕಾರಣ. ಅವರದು ಲಿಪಿಬದ್ಧ ಸಂಪ್ರದಾಯ ಕಡಿಮೆ. ಮೌಖಿಕ ಸಂಪ್ರದಾಯವೇ ಹೆಚ್ಚು. ವೇಗ, ತಾತ್ಕ್ಷಣಿತ ಪ್ರವೃತ್ತಿ ಅವರಲ್ಲಿ ಎದ್ದು ಕಾಣುವ ಗುಣಗಳು. ಅವರದು ಕಾಯುವಿಕೆಗೆ ಒಗ್ಗದ ಅಸಲು ಕಸುಬು. ಶಾಸ್ತ್ರಕ್ಕಿಂತ ಅವರಿಗೆ ಮನೋಧರ್ಮ ಪ್ರಧಾನವಾಗಿರುವ ಭಾವ ಮುಖ್ಯ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುವೆಂಪು ವಿವಿ ಕುಲಪತಿ ಪ್ರೊ. ಶರತ್ ಅನಂತಮೂರ್ತಿ ಅವರು ತಮ್ಮ ತಂದೆಯವರ ನೆನಪುಗಳು ಹಾಗೂ ಅವರ ಸಾಹಿತ್ಯದ ಕೆಲಸಗಳು, ಸಾಹಿತಿಗಳ ಸಂಪರ್ಕವನ್ನು ಸ್ಮರಿಸಿಕೊಂಡರು. ಇಂದಿನ ಸಂದರ್ಭದಲ್ಲಿ ಅಂತಹ ಆರೋಗ್ಯಕರ ಚರ್ಚೆಯ ವಾತಾವರಣ ಕಾಣದಿರುವುದರ ಬಗ್ಗೆ ವಿಷಾದಿಸಿದರು. ಸಾಹಿತ್ಯ ವಿಮರ್ಶೆ ಇನ್ನಷ್ಟು ಗಂಭೀರವಾಗಿ ನಡೆಯಬೇಕಾದ ಅಗತ್ಯವನ್ನು ತಿಳಿಸಿದರು. ವಿಶೇಷವಾಗಿ ಅಡಿಗರ ಪ್ರಸಿದ್ಧ ಕವಿತೆ ' ರಾಮನವಮಿಯ ದಿವಸ' ವನ್ನು ಓದಿ ಪದ್ಯ ಬರೆವ ಬಗೆಯ ಕುರಿತು ಗಂಭೀರ ಚರ್ಚೆ ನಡೆಸಿದ್ದನ್ನು ನಿರೂಪಿಸಿದರು. ತಂದೆಯವರ ಸೃಜನಾತ್ಮಕ ಪ್ರಕ್ರಿಯೆಯೇ ಅವರ ಮಾತಾಗಿತ್ತು. ಮಾತಾಡುತ್ತ ಆಡುತ್ತ ಅವರ ಚಿಂತನಶೀಲತೆ ಹುರಿಗಟ್ಟುತ್ತಿತ್ತು. ಅದಕ್ಕಾಗಿ ಅವರಿಗೆ ಜನಸಂಪರ್ಕದ ಅಗತ್ಯವಿತ್ತು. ಮಾತಿನ ಮೂಲಕವೇ ಅವರ ಹೊಸ ಯೋಚನೆಗಳು ರೂಪುತಳೆಯುತ್ತಿದ್ದವು ಎಂದು ತಿಳಿಸಿದರು.

ಕಾರಂತ ಮತ್ತು ಅಡಿಗರ ಜೀವನವನ್ನು ಬಿಂಬಿಸುವ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದ ಎಸ್ತರ್ ಅನಂತಮೂರ್ತಿ ಮತ್ತು ಕ್ಷಮಾ ರಾವ್ ಉಪಸ್ಥಿತರಿದ್ದರು.

ಕಾರಂತರ ಬಗೆಗಿನ ಅನಂತಮೂರ್ತಿಯವರ ಬಗೆಗಿನ ಉಪನ್ಯಾಸಕ್ಕೆ ಪ್ರತಿಸ್ಪಂದಿಸಿದ ಜಾನಪದ ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ. ಚಿನ್ನಪ್ಪ ಗೌಡ, ಮಾತನಾಡಿ, "ಕನ್ನಡದ ಮನಸ್ಸುಗಳನ್ನು ಕಟ್ಟುವ ಕೆಲಸವನ್ನು ತಮ್ಮ ಜೀವಮಾನದುದ್ದಕ್ಕೂ ಕಾರಂತರು ಮಾಡಿದವರು. ಒಂದು ಲಕ್ಷಪುಟಗಳಷ್ಟು ವಿಸ್ತಾರವಾದ, ನಾನೂರಕ್ಕೂ ಮಿಕ್ಕಿದ ಕೃತಿಗಳಷ್ಟು ವಿಪುಲವಾದ ಬರೆವಣಿಗೆ ಅವರದು. ಅವರನ್ನು ನೆನಪಿಸಿಕೊಂಡಾಗಲೆಲ್ಲ ನನಗೆ ಎದ್ದು ಕಾಣುವುದು ಅವರ ಸಿಟ್ಟು. ಅನಂತಮೂರ್ತಿಯವರು ಕಾರಂತರ ಕುರಿತು ಮಾತಾಡುತ್ತ ಅವರು ದಕ್ಷಿಣ ಕನ್ನಡ ಜಿಲ್ಲೆಯ ಭೂತ ಇದ್ದಂತೆ ಎಂದು ಹೇಳಿದ್ದು ನನ್ನನ್ನು ವಿಶೇಷವಾಗಿ ಸೆಳೆದಿದೆ ಎಂದು ಹೇಳಿದರು.

ಅಡಿಗರ ಬಗೆಗಿನ ಅನಂತಮೂರ್ತಿಯವರ ಬಗೆಗಿನ ಉಪನ್ಯಾಸಕ್ಕೆ ಕರ್ನಾಟಕ ಕೇಂದ್ರೀಯ ವಿವಿ ಕನ್ನಡ ವಿಭಾಗ ಮುಖ್ಯಸ್ಥ ಪ್ರೊ. ವಿಕ್ರಮ್ ವಿಸಾಜಿ ಮಾತನಾಡಿದರು.

ಕಾರಂತರ ಸಾಹಿತ್ಯ ಸೃಷ್ಟಿಯ ಕುರಿತ ವಿದ್ವತ್ ಗೋಷ್ಠಿಯಲ್ಲಿ ಹೆಸರಾಂತ ವಿಮರ್ಶಕರಾದ ಡಾ. ಟಿ. ಪಿ. ಅಶೋಕ, ಚಲನಚಿತ್ರ ನಿರ್ದೇಶಕರಾದ ಪಿ. ಶೇಷಾದ್ರಿ, ಬೆಂಗಳೂರಿನ ಎನ್‌ಎಂಕೆಆರ್ವಿ ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸಂಧ್ಯಾ ಹೆಗಡೆ ದೊಡ್ಡಹೊಂಡ ಭಾಗವಹಿಸಿದ್ದರು. ಪ್ರಾಧ್ಯಾಪಕಿ ಡಾ. ತಾರಿಣಿ ಶುಭದಾಯಿನಿ ಅಡಿಗರ ಕಾವ್ಯದ ಬಗ್ಗೆ ಮಾತನಾಡಿದರು. ಅಜೀಂ ಪ್ರೇಮ್‌ಜಿ ಫೌಂಡೇಷನ್ ನ ಮುಖ್ಯ ಸಂವಹನಾಧಿಕಾರಿ ಸುಧೀಶ್ ವೆಂಕಟೇಶ್ ಸ್ವಾಗತ ಕೋರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅಡಿಗರ ಕಾವ್ಯವಾಚನ, ಕಾರಂತರು ಮತ್ತು ಅಡಿಗರೊಂದಿಗಿನ ಒಡನಾಟದ ನೆನಪುಗಳ ಹಂಚಿಕೆ, ಯಕ್ಷಗಾನ ಪ್ರದರ್ಶನ ಕಾರ್ಯಕ್ರಮಕ್ಕೆ ಮೆರುಗನ್ನು ತಂದವು. ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಪ್ರಬಂಧ ಮತ್ತು ಅಡಿಗರ ಗೀತೆಗಳ ಗಾಯನ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನೂ ವಿತರಿಸಲಾಯಿತು.

ಹಿರಿಯ ಒಡಿಸ್ಸಿ ನೃತ್ಯ ಕಲಾವಿದೆ ಮತ್ತು ಶಿವರಾಮ ಕಾರಂತರ ಮಗಳಾದ ಕ್ಷಮಾ ರಾವ್, ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಉಮಾಶಂಕರ್ ಪೆರಿಯೋಡಿ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಕನ್ನಡ ಉಪಕ್ರಮದ ಸಹನಿರ್ದೇಶಕರಾದ ಎಸ್.ವಿ.ಮಂಜುನಾಥ್, ಡಯಟ್ ಉಡುಪಿಯ ಹಿರಿಯ ಉಪನ್ಯಾಸಕರಾದ ಡಾ. ಅಶೋಕ್ ಕಾಮತ್, ಪೂರ್ಣಪ್ರಜ್ಞ ಸೆಂಟರ್ ಫಾರ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್‌ನ ನಿರ್ದೇಶಕರಾದ ಡಾ. ಕೃಷ್ಣ ಕೊತ್ತಾಯರವರು ಉಪಸ್ಥಿತರಿದ್ದರು.


ಪ್ರಬಂಧ ಸ್ಪರ್ಧೆಯಲ್ಲಿ ಸುಶ್ಮಿತಾ, ಅಶ್ವಿನಿ. ಡಿ. ಎಸ್ ಹಾಗೂ ಮುಶೀನಾ ಬಾನು ಮೊದಲ ಮೂರು ಬಹುಮಾನ ಪಡೆದರು. ಗಾಯನ ಸ್ಪರ್ಧೆಯಲ್ಲಿ ಚಿನ್ಮಯಿ ರಾವ್, ಪ್ರಣದ್ ರಾವ್ ಹಾಗೂ ಅಕ್ಷರ ಬಹುಮಾನ ಗಳಿಸಿದರು.

**Print Media:**

**Date: 02 June, 2024**
**Jayakirana**

## Karanth was Manodharma Pradhan Lyricist: Lakshmish Golthadi

# ಕಾರಂತರದ್ದು ಶಾಸ್ತ್ರಕ್ಕಿಂತ ಮನೋಧರ್ಮ ಪ್ರಧಾನ ಸಾಹಿತ್ಯ




ಜಯಕಿರಣ ವರದಿ

ಉಡುಪಿ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವತಿಯಿಂದ ಇಲ್ಲಿನ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ 'ಸಾಹಿತ್ಯ ಸಹವಾಸ' ಕಾರ್ಯಕ್ರಮ ನಡೆಯಿತು.

ವಿಡಿಯೊ ಸರಣಿಯನ್ನು ಬಿಡುಗಡೆ ಮಾಡಿದ ನಾಡಿನ ಹಿರಿಯ ಸಾಹಿತಿಗಳು ಮತ್ತು ಚಿಂತಕರಾದ ಲಕ್ಷ್ಮೀಶ ತೋಳ್ಪಾಡಿಯವರು ಮಾತನಾಡಿ 'ಕಾರಂತರದು ಸ್ವಯಂಕೃತ ವ್ಯಕ್ತಿತ್ವ. ತಮ್ಮದಾರಿ ಮತ್ತು ಅಭಿವ್ಯಕ್ತಿಯನ್ನು ತಾನೇ ಕಂಡುಕೊಂಡವರು. ಅದೊಂದು ಚಾರಿತ್ರಿಕ ಸ್ಥಿತಿಯಷ್ಟೇ ಅಲ್ಲ, ಅದಕ್ಕೆ ಅವರ ವ್ಯಕ್ತಿತ್ವದ ಪ್ರಯೋಗಶೀಲತೆಯೂ ಕಾರಣ. ಅವರದು ಲಿಪಿಬದ್ಧ ಸಂಪ್ರದಾಯ ಕಡಿಮೆ. ಮೌಖಿಕ ಸಂಪ್ರದಾಯವೇ ಹೆಚ್ಚು. ವೇಗ, ತಾತ್ಕ್ಷಣಿತ ಪ್ರವೃತ್ತಿ ಅವರಲ್ಲಿ ಎದ್ದು ಕಾಣುವ ಗುಣಗಳು. ಅವರದು ಕಾಯುವಿಕೆಗೆ ಒಗ್ಗದ ಅಸಲು ಕಸುಬು. ಶಾಸ್ತ್ರಕ್ಕಿಂತ ಅವರಿಗೆ ಮನೋಧರ್ಮ ಪ್ರಧಾನವಾಗಿರುವ ಭಾವ ಮುಖ್ಯ' ಎಂದು ಹೇಳಿದರು.

ಪ್ರೊ. ಕೆ. ಚಿನ್ನಪ್ಪ ಗೌಡ, ಪ್ರೊ. ವಿಕ್ರಮ್ ವಿಸಾಜಿ ಉಪನ್ಯಾಸಕ್ಕೆ ಪ್ರತಿಕ್ರಿಯಿಸಿ ದರು. ಸಮಾರಂಭದ ಅಧ್ಯಕ್ಷತೆಯನ್ನು ಕುವೆಂಪು ವಿವಿ ಕುಲಪತಿ ಪ್ರೊ. ಶರತ್ ಅನಂತ ಮೂರ್ತಿ ವಹಿಸಿದ್ದರು.

ಕಾರಂತ ಮತ್ತು ಅಡಿಗರ ಜೀವನವನ್ನು ಬಿಂಬಿಸುವ ಛಾಯಾ ಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದ ಎಸ್ತರ್ ಅನಂತಮೂರ್ತಿ ಮತ್ತು ಕ್ಷಮಾ ರಾವ್ ಉಪಸ್ಥಿತರಿದ್ದರು.

**Print Media:**

**Date: 02 June, 2024**
**Hosadigantha**

## Karanth was Manodharma Pradhan Lyricist: Lakshmish Golthadi

### ಅಜೀಂ ಪ್ರೇಮ್‌ಜಿ ವಿವಿಯ ಸಾಹಿತ್ಯ ಸಹವಾಸಕ್ಕೆ ಚಾಲನೆ ನೀಡಿ ಡಾ.ಲಕ್ಷ್ಮೀಶ ತೋಳ್ಪಾಡಿ

# ಕಾರಂತರದ್ದು ಶಾಸ್ತ್ರಕ್ಕಿಂತ ಮನೋಧರ್ಮ ಪ್ರಧಾನ ಸಾಹಿತ್ಯ



Azim Premji University

**Print Media:**

**Date: 02 June 2024**
**Karavali Ale**

## Karanth was Manodharma Pradhan Lyricist: Lakshmish Golthadi

### ಅಜೀಂ ಪ್ರೇಮ್‌ಜಿ ವಿವಿಯ ಸಾಹಿತ್ಯ ಸಹವಾಸಕ್ಕೆ ಚಾಲನೆ ನೀಡಿ ಡಾ.ಲಕ್ಷ್ಮೀಶ ತೋಳ್ಪಾಡಿ

# ಕಾರಂತರದ್ದು ಶಾಸ್ತ್ರಕ್ಕಿಂತ ಮನೋಧರ್ಮ ಪ್ರಧಾನ ಸಾಹಿತ್ಯ

ಉಡುಪಿ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವತಿಯಿಂದ ಇಲ್ಲಿನ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ 'ಸಾಹಿತ್ಯ ಸಹವಾಸ' ಎಂಬ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಜ್ಞಾನಪೀಠ ಪ್ರಶಸ್ತಿ ವಿಜೇತ ದಿ. ಯು. ಆರ್.ಅನಂತಮೂರ್ತಿಯವರು ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಶಿವರಾಮ ಕಾರಂತ, ನವ್ಯ ಸಾಹಿತ್ಯ ಮತ್ತು ನವ್ಯ ಸಾಹಿತ್ಯದ ಹರಿಕಾರ ಗೋಪಾಲಕೃಷ್ಣ ಅಡಿಗರ ಕುರಿತು ನೀಡಿರುವ ಉಪನ್ಯಾಸಗಳನ್ನು ಇಂಗ್ಲಿಷ್ ಉಪಶೀರ್ಷಿಕೆಗಳೊಂದಿಗೆ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಯೂಟ್ಯೂಬ್ ವಾಹಿನಿಯ ಮೂಲಕ ಬಿಡುಗಡೆ ಮಾಡಲಾಯಿತು. ಮುಂದಿನ ದಿನಗಳಲ್ಲಿ ಈ ವಿದ್ವತ್ಪೂರ್ಣ ಉಪನ್ಯಾಸಗಳು ಪಾಡ್ಕಾಸ್ಟ್ ರೂಪದಲ್ಲಿಯೂ ಎಲ್ಲ ಆಸಕ್ತರಿಗೆ ಲಭ್ಯವಾಗಲಿವೆ.

ವಿಡಿಯೊ ಸರಣಿಯನ್ನು ಬಿಡುಗಡೆ ಮಾಡಿದ ನಾಡಿನ ಹಿರಿಯ ಸಾಹಿತಿಗಳು ಮತ್ತು ಚಿಂತಕರಾದ ಲಕ್ಷ್ಮೀಶ ತೋಳ್ಪಾಡಿಯವರು ಮಾತನಾಡಿ "ಮನಸ್ಸು ಮುಟ್ಟಬಹುದಾದ ಸೂಕ್ಷ್ಮಾತಿಸೂಕ್ಷ್ಮವಾದ ಲಹರಿಗಳನ್ನು, ಅಸ್ತಿತ್ವದ ಬಿಂದುಗಳನ್ನು ಈ ನೆಲದ ಮೂವರು ಮಹನೀಯರಾದ ಕಾರಂತರು, ಅನಂತಮೂರ್ತಿ ಮತ್ತು ಅಡಿಗರು ಮುಟ್ಟಿದವರು. ಅಡಿಗರು ಸಿದ್ಧಶೈಲಿಯಿಂದ ಹೊರಟು ಹೊಸಹುಟ್ಟು ಅಥವಾ ತಾವು ಪಡೆಯಬೇಕಾದ ನಾವೀನ್ಯತೆಯ ಅನುಕೂಲದ ಅನಿವಾರ್ಯತೆಯನ್ನು ತೋರಿಸಿಕೊಟ್ಟವರು ಎಂದು ಬಣ್ಣಿಸಿದರು.

ಕಾರಂತರದು ಸ್ವಯಂಕೃತ ವ್ಯಕ್ತಿತ್ವ ತಮ್ಮದಾರಿ ಮತ್ತು ಅಭಿವ್ಯಕ್ತಿಯನ್ನು ತಾನೇ ಕಂಡುಕೊಂಡವರು. ಅದೊಂದು ಚಾರಿತ್ರಿಕ ಸ್ಥಿತಿಯಷ್ಟೇ ಅಲ್ಲ; ಅದಕ್ಕೆ ಅವರ ವ್ಯಕ್ತಿತ್ವದ ಪ್ರಯೋಗಶೀಲತೆಯೂ ಕಾರಣ. ಅವರದು ಲಿಖಿತಬದ್ಧ ಸಂಪ್ರದಾಯ ಕಡಿಮೆ. ಮೌಖಿಕ ಸಂಪ್ರದಾಯವೇ ಹೆಚ್ಚು ವೇಗ, ತಾತ್ಕ್ಷಣಿಕ ಪ್ರವೃತ್ತಿ ಅವರಲ್ಲಿ ಎದ್ದು ಕಾಣುವ ಗುಣಗಳು. ಅವರದು ಕಾಯುವಿಕೆಗೆ ಒಗ್ಗದ ಅಸಲು ಕಸುಬು. ಶಾಸ್ತ್ರಕ್ಕಿಂತ ಅವರಿಗೆ ಮನೋಧರ್ಮ ಪ್ರಧಾನವಾಗಿರುವ ಭಾವ ಮುಖ್ಯ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುವೆಂಪು ವಿವಿ ಕುಲಪತಿ ಪ್ರೊ?ರ. ಶರತ್ ಅನಂತಮೂರ್ತಿ ಅವರು ತಮ್ಮ ತಂದೆಯವರ ನೆನಪುಗಳು




ಹಾಗೂ ಅವರ ಸಾಹಿತ್ಯದ ಕೆಲಸಗಳು, ಸಾಹಿತಿಗಳ ಸಂಪರ್ಕವನ್ನು ಸ್ಮರಿಸಿಕೊಂಡರು. ಇಂದಿನ ಸಂದರ್ಭದಲ್ಲಿ ಅಂತಹ ಆರೋಗ್ಯಕರ ಚರ್ಚೆಯ ವಾತಾವರಣ ಕಾಣದಿರುವುದರ ಬಗ್ಗೆ ವಿಷಾದಿಸಿದರು. ಸಾಹಿತ್ಯ ವಿಮರ್ಶೆ ಇನ್ನಷ್ಟು ಗಂಭೀರವಾಗಿ ನಡೆಯಬೇಕಾದ ಅಗತ್ಯವನ್ನು ತಿಳಿಸಿದರು. ವಿಶೇಷವಾಗಿ ಅಡಿಗರ ಪ್ರಸಿದ್ಧ ಕವಿತೆ ' ರಾಮನವಮಿಯ ದಿವಸ' ವನ್ನು ಓದಿ ಪದ್ಯ ಬರೆವ ಬಗೆಯ ಕುರಿತು ಗಂಭೀರ ಚರ್ಚೆ ನಡೆಸಿದ್ದನ್ನು ನಿರೂಪಿಸಿದರು. ತಂದೆಯವರ ಸೃಜನಾತ್ಮಕ ಪ್ರಕ್ರಿಯೆಯೇ ಅವರ ಮಾತಾಗಿತ್ತು. ಮಾತಾಡುತ್ತ ಆಡುತ್ತ ಅವರ ಚಿಂತನಶೀಲತೆ ಹುರಿಗಟ್ಟುತ್ತಿತ್ತು. ಅದಕ್ಕಾಗಿ ಅವರಿಗೆ ಜನಸಂಪರ್ಕದ ಅಗತ್ಯವಿತ್ತು. ಮಾತಿನ ಮೂಲಕವೇ ಅವರ ಹೊಸ ಯೋಚನೆಗಳು ರೂಪುತಳೆಯುತ್ತಿದ್ದವು ಎಂದು ತಿಳಿಸಿದರು.

ಕಾರಂತ ಮತ್ತು ಅಡಿಗರ ಜೀವನವನ್ನು ಬಿಂಬಿಸುವ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದ ಎಸ್ತರ್ ಅನಂತಮೂರ್ತಿ ಮತ್ತು ಕ್ಷಮಾ ರಾವ್ ಉಪಸ್ಥಿತರಿದ್ದರು.ಕಾರಂತರ ಬಗೆಗಿನ ಅನಂತಮೂರ್ತಿಯವರ ಬಗೆಗಿನ ಉಪನ್ಯಾಸಕ್ಕೆ ಪ್ರತಿಸ್ಪಂದಿಸಿದ ಜಾನಪದ ವಿವಿ ವಿಶ್ರಾಂತ ಕುಲಪತಿ ಪ್ರೊ?ರ. ಕೆ. ಚಿನ್ನಪ್ಪ ಗೌಡ, ಮಾತನಾಡಿ, "ಕನ್ನಡದ ಮನಸ್ಸುಗಳನ್ನು ಕಟ್ಟುವ ಕೆಲಸವನ್ನು ತಮ್ಮ ಜೀವಮಾನದುದ್ದಕ್ಕೂ ಕಾರಂತರು ಮಾಡಿದವರು. ಒಂದು ಲಕ್ಷಪುಟಗಳಷ್ಟು ವಿಸ್ತಾರವಾದ, ನಾನೂರಕ್ಕೂ ಮಿಕ್ಕಿದ ಕೃತಿಗಳಷ್ಟು ವಿಪುಲವಾದ ಬರವಣಿಗೆ ಅವರದು. ಅವರನ್ನು ನೆನಪಿಸಿಕೊಂಡಾಗಲೆಲ್ಲ ನನಗೆ ಎದ್ದು ಕಾಣುವುದು ಅವರ ಸಿಟ್ಟು ಅನಂತಮೂರ್ತಿಯವರು ಕಾರಂತರ ಕುರಿತು ಮಾತಾಡುತ್ತ ಅವರು ದಕ್ಷಿಣ ಕನ್ನಡ ಜಿಲ್ಲೆಯ ಭೂತ ಇದ್ದಂತೆ ಎಂದು ಹೇಳಿದ್ದು ನನ್ನನ್ನು ವಿಶೇಷವಾಗಿ ಸೆಳೆದಿದೆ ಎಂದು ಹೇಳಿದರು. ಅಡಿಗರ ಬಗೆಗಿನ ಅನಂತಮೂರ್ತಿಯವರ ಬಗೆಗಿನ ಉಪನ್ಯಾಸಕ್ಕೆ ಕರ್ನಾಟಕ ಕೇಂದ್ರೀಯ ವಿವಿ ಕನ್ನಡ ವಿಭಾಗ ಮುಖ್ಯಸ್ಥ ಪ್ರೊ?ರ. ವಿಕ್ರಮ್ ವಿಸಾಜಿ ಮಾತನಾಡಿದರು.

ಕಾರಂತರ ಸಾಹಿತ್ಯ ಸೃಷ್ಟಿಯ ಕುರಿತ ವಿದ್ವತ್ ಗೋಷ್ಠಿಯಲ್ಲಿ ಹೆಸರಾಂತ ವಿಮರ್ಶಕರಾದ ಡಾ. ಟಿ. ಪಿ. ಅಶೋಕ, ಚಲನಚಿತ್ರ ನಿರ್ದೇಶಕರಾದ ಪಿ. ಶೇಷಾದ್ರಿ, ಬೆಂಗಳೂರಿನ ಎನ್‌ಎಂಕೆಆರ್‌ವಿ ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸಂಧ್ಯಾ ಹೆಗಡೆ ದೊಡ್ಡಹೊಂಡ ಭಾಗವಹಿಸಿದ್ದರು. ಪ್ರಾಧ್ಯಾಪಕಿ ಡಾ. ತಾರಿಣಿ ಶುಭದಾಯಿನಿ ಅಡಿಗರ ಕಾವ್ಯದ ಬಗ್ಗೆ ಮಾತನಾಡಿದರು. ಅಜೀಂ ಪ್ರೇಮ್‌ಜಿ ಫೌಂಡೇಷನ್ ನ ಮುಖ್ಯ ಸಂವಹನಾಧಿಕಾರಿ ಸುಧೀಶ್ ವೆಂಕಟೇಶ್ ಸ್ವಾಗತ ಕೋರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅಡಿಗರ ಕಾವ್ಯವಾಚನ, ಕಾರಂತರು ಮತ್ತು ಅಡಿಗರೊಂದಿಗಿನ ಒಡನಾಟದ ನೆನಪುಗಳ ಹಂಚಿಕೆ, ಯಕ್ಷಗಾನ ಪ್ರದರ್ಶನ ಕಾರ್ಯಕ್ರಮಕ್ಕೆ ಮೆರುಗನ್ನು ತಂದವು. ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಪ್ರಬಂಧ ಮತ್ತು ಅಡಿಗರ ಗೀತೆಗಳ ಗಾಯನ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನೂ ವಿತರಿಸಲಾಯಿತು.

ಹಿರಿಯ ಒಡಿಸ್ಸಿ ನೃತ್ಯ ಕಲಾವಿದೆ ಮತ್ತು ಶಿವರಾಮ ಕಾರಂತರ ಮಗಳಾದ ಕ್ಷಮಾ ರಾವ್, ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಉಮಾಶಂಕರ್ ಪೆರಿಯೋಡಿ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಕನ್ನಡ ಉಪಕ್ರಮದ ಸಹನಿರ್ದೇಶಕರಾದ ಎಸ್.ವಿ.ಮಂಜುನಾಥ್, ಡಯಟ್ ಉಡುಪಿಯ ಹಿರಿಯ ಉಪನ್ಯಾಸಕರಾದ ಡಾ. ಅಶೋಕ್ ಕಾಮತ್, ಪೂರ್ಣಪ್ರಜ್ಞ ಸೆಂಟರ್ ಫಾರ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್‌ನ ನಿರ್ದೇಶಕರಾದ ಡಾ. ಕೃಷ್ಣ ಕೊತ್ತಾಯರವರು ಉಪಸ್ಥಿತರಿದ್ದರು.ಪ್ರಬಂಧ ಸ್ಪರ್ಧೆಯಲ್ಲಿ ಸುಸ್ಮಿತಾ, ಅಶ್ವಿನಿ. ಡಿ. ಎಸ್ ಹಾಗೂ ಮುಹೀನಾ ಬಾನು ಮೊದಲ ಮೂರು ಬಹುಮಾನ ಪಡೆದರು. ಗಾಯನ ಸ್ಪರ್ಧೆಯಲ್ಲಿ ಚಿನ್ಮಯಿ ರಾವ್, ಪ್ರಸಾದ್ ರಾವ್ ಹಾಗೂ ಅಕ್ಷರ ಬಹುಮಾನ ಗಳಿಸಿದರು.

**Print Media:**

**Date: 03 June, 2024**
**Deccan Herald**

## [Father's intellectualism manifested in his creativity: Sharath Ananthamurthy]

# Father's intellectualism manifested in his creativty: Sharath Ananthamurthy

**UDUPI, DHNS:** Thinker Lakshmish Tolpadi said veteran writers Shivram Karanth, Ananthamurthy, and Gopalkrishna Adiga have played important roles in developing emotive and thought-provoking content in their respective professions.

He was addressing the gathering at the Azim Premji University's Sahitya Sahavasa event at MGM College.

The day also saw the release of English-subtitled lectures by Shivram Karanth, Ananthamurthy and Gopalkrishna Adiga on YouTube. *These discussions will be available via podcast to interested listeners.*

*According to Tolpadi, the three writers mastered subtle vibrations which the mind can touch. Karanth favoured literature that was both personal* and not overly formal. He experimented extensively to develop his own literary style.

Tolpady said Adiga was recognized as the pioneer of necessity-based literature. Kuvempu University VC Prof Sharath Ananthamurthy strolled down memory lane and related his experience with his father. He stated that his father's intellectualism was manifested in creativity.

"He had to mingle and socialize with others as his thoughts surfaced during conversations. People's interactions would generate new ideas," Sharath noted. He also lamented over the lack of competent debate among litterateurs.

Dr K Chinnappa Gowda, former VC of Folklore University, said Karanth dedicated his life to developing Kannada brains.

**<u>Print Media:</u>**

**Date: 02 June, 2024**
**Vijayavani**

## [Critical, Creative Literature Ananthamurthy]



ವಿಜಯವಾಣಿ

Hear.com

ನ್ಯೂಸ್ › NRI › SSLC ಮಾರ್ಗದರ್ಶಿ ವೆಬ್‌ಸ್ಟೋರೀಸ್ ಜಿಲ್ಲೆ › ಲೋಕಸಮರ-2024 ಜೈ ಶ್ರೀರಾಮ FACE 2 FACE ಕ್ರೀಡೆ ವಾಣಿಜ್ಯ

HOME | ವಿಜಯವಾಣಿ ಸುದ್ದಿಜಾಲ


# ವಿಮರ್ಶಾತ್ಮಕ, ಸೃಷ್ಟೀಶಿಲ ಸಾಹಿತಿ ಅನಂತಮೂರ್ತಿ

01/06/2024 8:42 PM

## Print Media:

**Date: 02 June, 2024**
**Tulunadavarthe**

## Dr. Lakshmish Gholpadi launched the literary fest of Azim Premji University



# ಅಜೀಂ ಪ್ರೇಮ್‌ಜಿ ವಿವಿಯ ಸಾಹಿತ್ಯ ಸಹವಾಸಕ್ಕೆ ಚಾಲನೆ ನೀಡಿ ಡಾ.ಲಕ್ಷ್ಮೀಶ ತೋಳ್ಪಾಡಿ ಕಾರಂತರದ್ದು ಶಾಸ್ತ್ರಕ್ಕಿಂತ ಮನೋಧರ್ಮ ಪ್ರಧಾನ ಸಾಹಿತ್ಯ

By TNVOffice June 2, 2024

Share

- Advertisment -
Best Selling BLOG and MAGAZINE Theme of All Time
BUY NOW ›
300 x 250 Ad

MOST POPULAR

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ನಲ್ಲಿ ವಿಶ್ವ ಪರಿಸರ ದಿನಾಚರಣೆ
June 5, 2024

ದಕ್ಷಿಣ ಕನ್ನಡ, ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ರಾಜ್ಯದಲ್ಲೇ ಅತ್ಯಧಿಕ ನೋಟಾ ಮತಗಳ ಚಲಾವಣೆ
June 5, 2024

ಲೋಕಸಭೆ ಕ್ಷೇತ್ರದಲ್ಲಿ ಜಯಗಳಿಸಿದ ಬಿ... ಅಭ್ಯರ್ಥಿ ಬ್ರಿಜೇಶ್ ಚೌಟ ಕುದ್ರೋಳಿ ಶ್ರೀ

## Print Media:

**Date: 02 June, 2024**
**Upayukta**

## Dr. Lakshmish Gholpadi launched the literary fest of Azim Premji University

# ಅಜೀಂ ಪ್ರೇಮ್‌ಜಿ ವಿವಿಯ ಸಾಹಿತ್ಯ ಸಹವಾಸಕ್ಕೆ ಚಾಲನೆ ನೀಡಿ ಡಾ.ಲಕ್ಷ್ಮೀಶ ತೋಳ್ಪಾಡಿ

by Upayuktha - June 01, 2024 0

**ಕಾರಂತರದ್ದು ಶಾಸ್ತ್ರಕ್ಕಿಂತ ಮನೋಧರ್ಮ ಪ್ರಧಾನ ಸಾಹಿತ್ಯ**




**ಉಡುಪಿ:** ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವತಿಯಿಂದ ಇಲ್ಲಿನ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ 'ಸಾಹಿತ್ಯ ಸಹವಾಸ' ಎಂಬ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಜ್ಞಾನಪೀಠ ಪ್ರಶಸ್ತಿ ವಿಜೇತ ದಿ. ಯು.ಆರ್.ಅನಂತಮೂರ್ತಿಯವರು ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಶಿವರಾಮ ಕಾರಂತ, ನವ್ಯ ಸಾಹಿತ್ಯ, ಮತ್ತು ನವ್ಯ ಸಾಹಿತ್ಯದ ಹರಿಕಾರ ಗೋಪಾಲಕೃಷ್ಣ ಅಡಿಗರ ಕುರಿತು ನೀಡಿರುವ ಉಪನ್ಯಾಸಗಳನ್ನು ಇಂಗ್ಲಿಷ್ ಉಪಶೀರ್ಷಿಕೆಗಳೊಂದಿಗೆ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಯೂಟ್ಯೂಬ್ ವಾಹಿನಿಯ ಮೂಲಕ ಬಿಡುಗಡೆ ಮಾಡಲಾಯಿತು. ಮುಂದಿನ ದಿನಗಳಲ್ಲಿ ಈ ವಿದ್ವತ್ಪೂರ್ಣ ಉಪನ್ಯಾಸಗಳು ಪಾಡ್ಕಾಸ್ಟ್ ರೂಪದಲ್ಲಿಯೂ ಎಲ್ಲ ಆಸಕ್ತರಿಗೆ ಲಭ್ಯವಾಗಲಿವೆ.

ವಿಡಿಯೊ ಸರಣಿಯನ್ನು ಬಿಡುಗಡೆ ಮಾಡಿದ ನಾಡಿನ ಹಿರಿಯ ಸಾಹಿತಿಗಳು ಮತ್ತು ಚಿಂತಕರಾದ ಲಕ್ಷ್ಮೀಶ ತೋಳ್ಪಾಡಿಯವರು ಮಾತನಾಡಿ "ಮನಸ್ಸು ಮುಟ್ಟಬಹುದಾದ ಸೂಕ್ಷ್ಮಾತಿಸೂಕ್ಷ್ಮವಾದ ಲಹರಿಗಳನ್ನು, ಅಸ್ತಿತ್ವದ ಬಿಂದುಗಳನ್ನು ಈ ನೆಲದ ಮೂವರು ಮಹನೀಯರಾದ

**Print Media:**

**Date: 02 June, 2024**
**Lokabandhu**

## [Karanth was Manodharma Pradhan Lyricist: Golthadi]

ಲೋಕಬಂಧು

HOME ಅಧ್ಯಾತ್ಮ (SPIRITUAL) ಸಮಾಚಾರ (NEWS) ಇತರ (OTHER)



# ಕಾರಂತರದು ಮನೋಧರ್ಮ ಪ್ರಧಾನ ಸಾಹಿತ್ಯ: ತೋಳ್ಪಾಡಿ

Saturday, June 1, 2024 -

**ಲೋಕಬಂಧುನ್ಯೂಸ್ ಡೆಸ್ಕ್, ಉಡುಪಿ**

ಶಿವರಾಮ ಕಾರಂತರದು ಸ್ವಯಂಕೃತ ವ್ಯಕ್ತಿತ್ವ. ತನ್ನ ದಾರಿ ಮತ್ತು ಅಭಿವ್ಯಕ್ತಿಯನ್ನು ತಾನೇ ಕಂಡುಕೊಂಡವರು. ಅದೊಂದು ಚಾರಿತ್ರಿಕ ಸ್ಥಿತಿಯಷ್ಟೇ ಅಲ್ಲ, ಅದಕ್ಕೆ ಅವರ ವ್ಯಕ್ತಿತ್ವದ ಪ್ರಯೋಗಶೀಲತೆಯೂ ಕಾರಣ ಎಂದು ಹಿರಿಯ ಸಾಹಿತಿ ಮತ್ತು ಚಿಂತಕ ಲಕ್ಷ್ಮೀಶ ತೋಳ್ಪಾಡಿ ಹೇಳಿದರು.

ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯ ವತಿಯಿಂದ ಇಲ್ಲಿನ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಶನಿವಾರ ನಡೆದ 'ಸಾಹಿತ್ಯ

**Print Media:**

**Date: 02 June, 2024**
**Namma Udupi Bulletin**

**[Karanth was Manodharma Pradhan Lyricist: Lakshmish Golthadi]**

ಸುದ್ದಿಗಳು ಪ್ರಾದೇಶಿಕ

# ಕಾರಂತರದ್ದು ಶಾಸ್ತ್ರಕ್ಕಿಂತ ಮನೋಧರ್ಮ ಪ್ರಧಾನ ಸಾಹಿತ್ಯ: ಡಾ.ಲಕ್ಷ್ಮೀಶ ತೋಳ್ಪಾಡಿ

By **Udupi Bulletin News Desk** - June 1, 2024 0




ಗ್ರೂಪ್ ಗೆ ಸೇರಿ! 1: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ವತಿಯಿಂದ ಇಲ್ಲಿನ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ 'ಸಾಹಿತ್ಯ ಸಹವಾಸ' ಎಂಬ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಜ್ಞಾನಪೀಠ ಪ್ರಶಸ್ತಿ ವಿಜೇತ ದಿ.